# ಕರ್ನಾಟಕ ಲೋಕಾಯುಕ್ತ

ಸಂಖ್ಯೆ : ಕಂಪ್ಲಂಟ್/ಉಪಲೋಕ್/ಎಂವೈಎಸ್/9945/2018/ಡಿಆರ್‌ಇ-2.

ಬಹು ಮಹಡಿಗಳ ಕಟ್ಟಡ,
ಡಾ. ಬಿ.ಆರ್.ಅಂಬೇಡ್ಕರ್ ವೀಧಿ,
ಬಹು ಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ 13.01.2020.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1) ರ ಅನ್ವಯ ವರದಿ

ವಿಷಯ: ದೂರುದಾರ ಶ್ರೀ **ಪ್ರದೀಪ್ ಫರ್ನಾಂಡೀಸ್,** ಮಂಗಳೂರು ರವರು **ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಂಗಳೂರು,** ದಕ್ಷಿಣ ಕನ್ನಡ ಜಿಲ್ಲೆ ರವರು ಸಲ್ಲಿಸಿದ ದೂರಿನ ಮೇರೆಗೆ ಬಡಗಯಕ್ಕೂರು ಗ್ರಾಮದ ಸರ್ವೆ ನಂ. 194/1ಎ ಮತ್ತು 194/2 ರ ಜಮೀನಿನಲ್ಲಿ ಅಕ್ರಮಗಣಿಗಾರಿಕೆ ಮಾಡಿ ಕೆಂಪು ಕಲ್ಲನ್ನು ಕಳ್ಳತನದಿಂದ ತೆಗೆದು ಪರವಾನಗಿ ಇಲ್ಲದೇ ಎಷ್ಟು ಪ್ರಮಾಣ ಕೆಂಪು ಕಲ್ಲನ್ನು ತೆಗೆದು ಅಕ್ರಮವಾಗಿ ಮಾರಾಟ ಮಾಡಿ ಸರ್ಕಾರಕ್ಕೆ ರಾಜಸ್ವ ನಷ್ಟಪಡಿಸಿದ್ದಾರೆ ಎಂಬುದನ್ನು ಲೆಕ್ಕ ಹಾಕಿ ಸದರಿ ನಷ್ಟವನ್ನು ವಸೂಲು ಮಾಡುವ ಕುರಿತು.

**********

ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ, ಮಚರಾ ಮನೆ, ನೀರುಂಡೆ ಅಂಚೆ, ಶ್ರೀ **ಪ್ರದೀಪ್ ಫರ್ನಾಂಡಿಸ್** (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ **ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಂಗಳೂರು** (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ದ ಆಪಾದಿಸಿ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9 ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದೆ.

2. ದೂರುದಾರರಾದ ಶ್ರೀ ಪ್ರದೀಪ್ ಫರ್ನಾಂಡೀಸ್ ಬಿನ್ ಸೈರಿಲ್ ಫರ್ನಾಂಡೀಸ್, ಮಚರಾ ಮನೆ, ನೀರುಂಡೆ ಅಂಚೆ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ ರವರು ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಂಗಳೂರು ದಕ್ಷಿಣ ಕನ್ನಡ ಜಿಲ್ಲೆ ರವರ ವಿರುದ್ಧ ಆಪಾದಿಸಿ ಈ ಕಛೇರಿಗೆ ದೂರು ಸಲ್ಲಿಸಿರುತ್ತಾರೆ.

3. ದೂರುದಾರರು ದಾಖಲೆಗಳನ್ನು ಮತ್ತು ಛಾಯಾಚಿತ್ರಗಳನ್ನು ಹಾಜರುಪಡಿಸಿರುತ್ತಾರೆ. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ರವರು ಖಂಡಿಕೆ 17ರ ಮಾನ್ಯ ಗೌರವಾನ್ವಿತರ ನಿರ್ದೇಶನದಂತೆ ಉಪ

ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಂಗಳೂರು ಕಛೇರಿಯಲ್ಲಿ ದಿ: 27/06/2018 ರಿಂದ ಈವರೆಗೆ ಕಾರ್ಯ ನಿರ್ವಹಿಸಿರುವ ಅಧಿಕಾರಿಗಳ ವಿವರವನ್ನು ನೀಡಿದ್ದಾರೆ.

4. ದೂರುದಾರರು ತಮ್ಮ ಜಮೀನಿನ ಸರ್ವೆ ನಂ. 194/1ಅ, 194/2, 193/3ಬಿ, 192/3 ಜಮೀನುಗಳಲ್ಲಿ ಶ್ರೀ ಧನಂಜಯ್ ಶೆಟ್ಟಿ ಮತ್ತು ಇತರರು ಅಕ್ರಮ ಗಣಿಗಾರಿಕೆ ಮಾಡುತ್ತಿರುವ ವಿಚಾರವನ್ನು ಎದುರುದಾರರಿಗೆ ನೀಡಿದರೂ ಕ್ರಮ ಕೈಗೊಂಡಿಲ್ಲವೆಂದು ಆಪಾದಿಸಿರುವುದರಿಂದ, ದೂರುದಾರರು ಹಾಜರುಪಡಿಸಿರುವ ಛಾಯಾಚಿತ್ರಗಳಲ್ಲಿ ಕಾಣುವಂತೆ ಶ್ರೀ ಧನಂಜಯ್ ಶೆಟ್ಟಿ ಮತ್ತು ಇತರರು ಅಕ್ರಮ ಗಣಿಗಾರಿಕೆ ಮಾಡುತ್ತಿರುವ ಬಗ್ಗೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ಇವರಿಗೆ ಸೂಕ್ತ ತನಿಖೆ ಮಾಡಿ ತ್ವರಿತವಾಗಿ ವರದಿ ಸಲ್ಲಿಸುವಂತೆ ಪತ್ರ ಬರೆದು ತಿಳಿಸಲಾಗಿತ್ತು.

5. ದಿನಾಂಕ: 29/11/2019 ರಂದು ಎದುರುದಾರರು ವರದಿ ಸಲ್ಲಿಸಿದ್ದಾರೆ, ಅದನ್ನು ಪರಿಶೀಲಿಸಲಾಗಿ, ದಿನಾಂಕ: 08/08/2019 ರಂದು ಕಂದಾಯ ಇಲಾಖೆಯ ಅಧಿಕಾರಿಗಳು ಹಾಗೂ ಇಲಾಖೆಯ ಗೃಹ ರಕ್ಷಕ ದಳ ಸಿಬ್ಬಂದಿಯೊಂದಿಗೆ ಸರ್ವೆ ನಂ. 194/1ಅ, 194/2, 193/3ಬಿ, 192/3 ಜಮೀನುಗಳಿಗೆ ಭೇಟಿ ನೀಡಿ ಜಂಟಿ ಕಾರ್ಯಾಚರಣೆ ನಡೆಸಿ, ಪರಿಶಿಲಿಸಿದಾಗ, ಸರ್ವೆ ನಂ. 194/1ಎ ಹಾಗೂ 2ರಲ್ಲಿ ಕೆಂಪು ಕಲ್ಲು ಕಡಿಯುವ ಯಂತ್ರ ಹಾಗೂ ಕೆಎ 19 ಎಂಜೆ 3475 ಜೆಸಿಬಿ ವಾಹನ ಇದ್ದವು. ಪಂಚರ ಸಮಕ್ಷಮ ಸ್ಥಳ ಮಹಜರ್ ನಡೆಸಿ ಕೆಎ 19 ಕೆಎಂ. 3745 ಜೆಸಿಬಿ ವಾಹನ, ಕಲ್ಲು ಕಡಿಯುವ ಯಂತ್ರವನ್ನು ಜಪ್ತಿ ಪಡಿಸಿಕೊಂಡು ಇಲಾಖೆಯ ಸ್ಟಾಕ್ ಯಾರ್ಡ್‌ಗೆ ಸ್ಥಳಾಂತರಿಸಲಾಗಿದೆ. ಈಗ ಅಕ್ರಮ ಗಣಿಗಾರಿಕೆ ಸ್ಥಗಿತಗೊಂಡಿದೆ. ಅಮೂಲ್ಯ ಉಪ ಖನಿಜವಾದ ಕೆಂಮ ಕಲ್ಲನ್ನು ಕಳ್ಳತನ್ನದಿಂದ ತೆಗೆದು ಪರವಾನಗಿ ಇಲ್ಲದೇ ಹಾಗೂ ರಾಜಸ್ವ ಸಂದಾಯ ಮಾಡದೇ ಸಾಗಾಟ ಮಾಡಿ ಗಣಿ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ ಕಲಂ 21, 22 ಮತ್ತು ಕರ್ನಾಟಕ ಉಪ ಖನಿಜಗಳ ರಿಯಾಯಿತಿ ನಿಯಮಾವಳಿಗಳ 1944ರ ನಿಯಮಗಳು 3(1), 36(3), 43 ಮತ್ತು 44 ಅನ್ವಯ ಶಿಕ್ಷೆಗೆ ಬದ್ದರಾದ ಅಪರಾಧ ಎಸಗಿರುವುದು ದೃಡಪಟ್ಟಿರುವುದರಿಂದ ಆರೋಪಿಗಳ ವಿರುದ್ಧ ಮಂಗಳೂರಿನ 6ನೇ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ದಿನಾಂಕ: 28/08/2019 ರಂದು ಖಾಸಗಿ ದೂರನ್ನು ಸಲ್ಲಿಸಲಾಗಿದೆ ಅಂತಾ ವರದಿ ಸಲ್ಲಿಸಿದ್ದಾರೆ.

6. ಸಂಖ್ಯೆ: ಗಭೂಇ/ಉನಿಮಂ/ಉಪಲೋಕ್/ಎಂ.ವೈ.ಎಸ್.,-9945/2018/ಡಿ.ಆರ್.ಇ-2/2019-20/ 1664, ದಿನಾಂಕ: 30/10/2019ರ ವರದಿಯಿಂದ ದೂರುದಾರರು ಆಪಾದಿಸಿದಂತೆ ಸರ್ವೆ ನಂ. 194ಎ ಮತ್ತು 194/2ರಲ್ಲಿ ಕೆಂಪು ಕಲ್ಲು ಗಣಿಗಾರಿಕೆಯನ್ನು ಅಕ್ರಮವಾಗಿ ಮಾಡಿ ಸರ್ಕಾರಕ್ಕೆ ನಷ್ಟಪಡಿಸಿದ್ದಾರೆ ಎಂಬುದು ಕಂಡುಬರುತ್ತದೆ. ದಿನಾಂಕ: 04/09/2019ರ ವರದಿಯಲ್ಲಿಯ ಉಪ ನಿರ್ದೇಶಕರು (ಪ್ರಭಾರ), ಗಣಿ ಮತ್ತು ಭೂವಿಜ್ಞಾನ ಇಲಾಖೆ ರವರು ಸರ್ವೆ ನಂ. 194ಎ ಮತ್ತು 194/2ರಲ್ಲಿ ಕೆಂಪು ಕಲ್ಲು ಗಣಿಗಾರಿಕೆ ಮಾಡಿದ್ದವರ ವಿರುದ್ಧ ಸಲ್ಲಿಸಿದ್ದ ಖಾಸಗಿ ದೂರಿನ ಪ್ರತಿ, ಸ್ಥಳ ಮಹಜರ್, ಸದರಿ ಜಪ್ತಿ ಪಡಿಸಿದ ವಾಹನದ ದಾಖಲೆಯ ಜೆರಾಕ್ಸ್ ಪ್ರತಿ, ಜೆಸಿಬಿ ಮತ್ತು ಇತರೆ ಯಂತ್ರಗಳ ಛಾಯಾಚಿತ್ರಗಳ ಪ್ರತಿ, ವಿಶೇಷ ರಾಜ್ಯ ಪತ್ರಿಕೆ ಪ್ರತಿಯನ್ನು ಹಾಜರುಪಡಿಸಿದ್ದಾರೆ. ಮಹಜರ್‌ನ್ನು ಪರಿಶೀಲಿಸಿದಾಗ, ದಿನಾಂಕ: 08/08/2019 ರಂದು ಪಂಚರ್ ಸಮಕ್ಷಮ ತಯಾರಿಸಲಾಗಿದೆ ಎಂಬುದು ಕಂಡುಬರುತ್ತದೆ.

7. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರ ವರದಿಯಿಂದ ದೂರುದಾರರು ಆಪಾದಿಸಿದಂತೆ ಸರ್ವೆ ನಂ. 194ಎ ಮತ್ತು 194/2ರಲ್ಲಿ ಅಕ್ರಮ ಕೆಂಪು ಕಲ್ಲು ಗಣಿಗಾರಿಕೆ ನಡೆಯುತ್ತಿತ್ತು ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ. ದೂರುದಾರರು ದಿನಾಂಕ: 27/06/2018 ರಂದು ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಂಗಳೂರು ರವರಿಗೆ ದೂರು ನೀಡಿದ್ದರೂ ಸಹಿತ ಯಾವುದೇ ಕ್ರಮ ಕೈಗೊಳ್ಳದೇ, ಲೋಕಾಯುಕ್ತ ಸಂಸ್ಥೆಯಲ್ಲಿ ದೂರು ಸಲ್ಲಿಸಿದ ನಂತರ, ಇಲ್ಲಿಯಿಂದ ವರದಿ ಕೇಳಿದಾಗ, ಗಣಿ ಮತ್ತು ಭೂವಿಜ್ಞಾನ ಇಲಾಖೆಯವರು ಕಂದಾಯ ಇಲಾಖೆಯವರೊಂದಿಗೆ ಸ್ಥಳಕ್ಕೆ ಭೇಟಿ ನೀಟಿ ಜಂಟಿ ಕಾರ್ಯಾಚರಣೆ ನಡೆಸಿ ಅಕ್ರಮ ಕೆಂಪು ಕಲ್ಲು ಗಣಿಗಾರಿಕೆಯನ್ನು ಸ್ಥಗಿತಗೊಳಿಸಿದ್ದಾಗಿ ಮತ್ತು ಅಲ್ಲಿದ್ದ ವಾಹನ ಮತ್ತು ಇತರೆ ವಾಹನಗಳನ್ನು ಜಪ್ತಿ ಪಡಿಸಿಕೊಂಡು ಆರೋಪಿ ವಿರುದ್ಧ ಖಾಸಗಿ ಫಿರ್ಯಾದಿ ಸಂಖ್ಯೆ: 38/2019 ನೇದ್ದನ್ನು 28/08/2019 ರಂದು ಮಂಗಳೂರಿನ 6ನೇ ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ ದಾಖಲಿಸಿದ್ದಾರೆ.

8. ಈ ಎಲ್ಲಾ ಸಂಗತಿಗಳನ್ನು ನೋಡಲಾಗಿ, ಎದುರುದಾರರು ತಮಗೆ ಅಕ್ರಮ ಗಣಿಗಾರಿಕೆ ಬಗ್ಗೆ ದೂರು ಬಂದ ನಂತರವು ಸಹಿತ ಯಾವುದೇ ಕ್ರಮ ಕೈಗೊಳ್ಳದೇ ಸರ್ಕಾರದ ಅಮೂಲ್ಯ ಉಪ ಖನಿಜವಾದ ಕೆಂಪು ಕಲ್ಲನ್ನು ಕಳ್ಳತನ್ನದಿಂದ ತೆಗೆದು ಯಾವುದೇ ಪರವಾನಗಿ ಇರಲಾರದೇ ಹಾಗೂ ರಾಜಸ್ವ ಸಂದಾಯ ಮಾಡದೇ ಸಾಗಾಟ ಮಾಡಲು ಪರೋಕ್ಷವಾಗಿ ಕಾರಣರಾಗಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

9. ಆದ್ದರಿಂದ, ಮಂಗಳೂರು ತಾಲ್ಲೂಕು ಬಡಗಯಕ್ಕೂರು ಗ್ರಾಮದ ಸರ್ವೆ ನಂ. 194/1ಎ ಮತ್ತು 194/2ರ ಜಮೀನಿನಲ್ಲಿ ಅಕ್ರಮ ಗಣಿಗಾರಿಕೆ ಮಾಡಿ ಕೆಂಪು ಕಲ್ಲನ್ನು ಕಳ್ಳತನದಿಂದ ತೆಗೆದು ಪರವಾನಗಿ ಇಲ್ಲದೇ ಎಷ್ಟು ಪ್ರಮಾಣ ಕೆಂಪು ಕಲ್ಲನ್ನು ತೆಗೆದು ಅಕ್ರಮವಾಗಿ ಮಾರಾಟ ಮಾಡಿ ಸರ್ಕಾರಕ್ಕೆ ರಾಜಸ್ವ ನಷ್ಟಪಡಿಸಿದ್ದಾರೆ ಎಂಬುದನ್ನು ಲೆಕ್ಕ ಹಾಕಿ, ಸದರಿ ನಷ್ಟವನ್ನು ವಸೂಲು ಮಾಡಲು ಸೂಕ್ತ ಕ್ರಮಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಈಗ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

10. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12 (2) ರ ಪ್ರಕಾರ ಸಕ್ಷಮ ಪ್ರಾಧಿಕಾರದವರು ಈ ವರದಿಯ ಮೇಲೆ ಏನು ಕ್ರಮಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

18-1-20

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ)
ಗೌರವಾನ್ವಿತ ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.